ಶ್ರೀ ಡಿ.ಬಿ.ಚಂದ್ರೇಗೌಡ: ತೊಂದರೆಯೇನೂ ಇಲ್ಲ. ತಾವು ಕೇಳಿರುವ ಹಾಗೆ ಇವು ಸಾರ್ವಜನಿಕ ಸೌಲಭ್ಯಗಳಿಗಾಗಿ ಮೀಸಲಿಟ್ಟಂಥ ನಿವೇಶನಗಳು. ಕರ್ನಾಟಕ ಕೈಗಾರಿಕಾ ಅಭಿವೃದ್ಧಿ ಮಂಡಳಿಯವರ ವಶದಲ್ಲಿರುವ 'ಸಾರ್ವಜನಿಕ ಸೌಲಭ್ಯಗಳಿಗಾಗಿ ಮೀಸಲಿಟ್ಟ ನಿವೇಶನಗಳು ಎಂದೇ ತಮ್ಮ ಪ್ರಶ್ನೆ ಇರುವುದು' ಹೀಗೆ ಸಾರ್ವಜನಿಕ ಸೌಲಭ್ಯಗಳಿಗಾಗಿ ಮೀಸಲಿಟ್ಟ ನಿವೇಶನಗಳನ್ನು ಒಂದು ಏಜೆನ್ಸಿ ಮೂಲಕ ಕೊಡುವುದಕ್ಕೆ ಆಗುವುದಿಲ್ಲ. ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯು ಅಲ್ಲಿಯ ಪರಿಸ್ಥಿತಿಗೆ ಅನುಗುಣವಾಗಿ ಸೈಟುಗಳನ್ನು ಹಂಚುತ್ತದೆ. ಖಾಸಗಿಯವರಿಗೆ ಅಥವಾ ಮತ್ತೊಬ್ಬರಿಗೆ ಕೊಡುವುದಾದರೆ ಸಿಂಗಲ್ ವಿಂಡೋ ಏಜೆನ್ಸಿ ಬಗ್ಗೆ ಆಲೋಚನೆ ಮಾಡಬಹುದು.

ಶ್ರೀ ಡಿ.ಆರ್. ಪಾಟೀಲ್: ಅವುಗಳಲ್ಲೇನಾದರೂ ಮೀಸಲಿಟ್ಟ ಸೌಲಭ್ಯ ತರುತ್ತೀರಾ?

ಶ್ರೀ ಡಿ.ಬಿ.ಚಂದ್ರೇಗೌಡ: ಈ ಪ್ರಶ್ನೆ ಅನ್ವಯವಾಗುವುದಿಲ್ಲ. ಏಕೆಂದರೆ ಈ ಸೈಟುಗಳು ಸಾರ್ವಜನಿಕ ಸೌಲಭ್ಯಕ್ಕಾಗಿ ಇಟ್ಟಂಥ ಸೈಟುಗಳು. ಇದರಲ್ಲಿ ಹೇಗೆ ಮೀಸಲಾತಿ ಕೊಡುವುದು? ನಾವು ಆ ಸೈಟುಗಳನ್ನು ಇಂಡಿವಿಜುಯಲ್‌ಗಳಿಗೆ ಕೊಡುವುದೇ ಇಲ್ಲ.

ಶ್ರೀ ಜಗದೀಶ್ ಶೆಟ್ಟರ್: ಸಿವಿಲ್ ಅಮಿನಿಟೀಸ್ ಸಲುವಾಗಿ ಇಟ್ಟಂಥಾದ್ದನ್ನು ಖಾಸಗಿಯವರಿಗೆ ಕೊಡುವುದಿಲ್ಲ ಎಂದು ಹೇಳಿದ್ದಾರೆ. ಅದನ್ನು ಹಾಗೆ ಕೊಡಲೂ ಬರುವುದಿಲ್ಲ. ಆದರೆ ಈ ಸೈಟುಗಳನ್ನು ಯಾವ ಉದ್ದೇಶದ ಸಲುವಾಗಿ ಕೊಡುತ್ತೀರಿ ಅಥವಾ ಅದನ್ನು ರಿಸರ್ವ್ ಮಾಡಿ ಇಟ್ಟಿರುತ್ತೀರೋ ಅಥವಾ ವೇಕೆಂಟ್ ಇಟ್ಟಿರುತ್ತೀರೋ ಎನ್ನುವುದನ್ನು ಹೇಳಬೇಕು.

ಶ್ರೀ ಡಿ.ಬಿ.ಚಂದ್ರೇಗೌಡ: ಪೋಸ್ಟ್‌ಆಫೀಸ್, ಪಾರ್ಕುಗಳು, ಶಾಲೆಗಳು ಹಾಗೂ ಇನ್ನಿತರ ಸೌಲಭ್ಯಗಳಿಗಾಗಿ ಆಯಾಯ ಕೈಗಾರಿಕಾ ಅಭಿವೃದ್ಧಿ ಪ್ರದೇಶದ ವ್ಯಾಪ್ತಿಯಲ್ಲಿನ ಅವಶ್ಯಕತೆಗನುಗುಣವಾಗಿ ಹಂಚುತ್ತಾರೆ.

ಜಿಲ್ಲಾ ಮತ್ತು ತಾಲ್ಲೂಕು ಮಟ್ಟದಲ್ಲಿ ಉಪಹಾರ ಮಂದಿರಗಳನ್ನು ತೆರೆಯುವುದು

234 (2550) ಎಸ್. ಸುರೇಶ್ ಕುಮಾರ್ (ರಾಜಾಜಿನಗರ):

ಮಾನ್ಯ ಮುಖ್ಯಮಂತ್ರಿಯವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

(ಅ) ಸರ್ಕಾರಿ ಆದೇಶ ಸಂಖ್ಯೆ. ಜಿಎಡಿ 114 ಡಿಬಿಎಂ 72 ದಿನಾಂಕ 19-10-1974ರ ಆದೇಶದಂತೆ ಕರ್ನಾಟಕ ಸರ್ಕಾರ ಸಚಿವಾಲಯ ಇಲಾಖಾ ಉಪಹಾರ ಮಂದಿರವನ್ನು ಸರ್ಕಾರವೇ ನೇಮಿಸಿರುವ ಸಮಿತಿಯವರು ಕಳೆದ 20 ವರ್ಷಗಳಿಂದಲೂ ನಡೆಸಿಕೊಂಡು ಬರುತ್ತಿರುವುದು ನಿಜವಲ್ಲವೇ?

(ಆ) ಹಾಗಿದ್ದಲ್ಲಿ, ಸದರಿ ನೌಕರರನ್ನು ಕಾರ್ಮಿಕ ಕಾನೂನು ಅನ್ವಯಿಸಿ ಅವರ ವೇತನವನ್ನು ಸರ್ಕಾರಿ ತತ್ಸಮಾನ ನೌಕರರ ವೇತನಕ್ಕೆ ಸಮಗೊಳಿಸಲು ಕ್ರಮ ಕೈಗೊಳ್ಳಲಾಗುವುದೇ;

(ಇ) ಸದ್ರಿ ಸರ್ಕಾರದ ಆದೇಶಾನುಸಾರ ಜಿಲ್ಲಾ ಹಾಗೂ ತಾಲ್ಲೂಕು ಮಟ್ಟಗಳಲ್ಲಿ ಸರ್ಕಾರವೇ ನೇಮಿಸಿರುವ ಸಮಿತಿಯವರಿಂದ ಉಪಹಾರ ಮಂದಿರಗಳನ್ನು ತೆರೆಯಲಾಗಿದೆಯೆ; ಹಾಗಿದ್ದರೆ ಯಾವ ಯಾವ ಸ್ಥಳಗಳಲ್ಲಿ ಎಷ್ಟು ಉಪಹಾರ ಮಂದಿರಗಳನ್ನು ತೆರೆಯಲಾಗಿದೆ? (ಮಾಹಿತಿ ಒದಗಿಸುವುದು)

ಶ್ರೀ ಎಸ್.ಎಂ. ಕೃಷ್ಣ (ಮುಖ್ಯಮಂತ್ರಿಗಳು.)

(ಅ) ನಿಜ.

(ಆ) ಇಲ್ಲ.

(ಇ) ಇಲ್ಲ, ದಿನಾಂಕ 19-10-1974ರ ಸರ್ಕಾರಿ ಆದೇಶ ಕರ್ನಾಟಕ ಸರ್ಕಾರ ಸಚಿವಾಲಯದಲ್ಲಿ ಉಪಹಾರ ಮಂದಿರವನ್ನು ಪ್ರಾರಂಭಿಸುವ ವಿಷಯಕ್ಕೆ ಮಾತ್ರ ಸೀಮಿತವಾಗಿರುವುದು.

ಶ್ರೀ ಎಸ್. ಸುರೇಶ್ ಕುಮಾರ್: ಮಾನ್ಯ ಸಭಾಧ್ಯಕ್ಷರೇ, "ಆ ಪ್ರಶ್ನೆಗೆ ಉತ್ತರದಲ್ಲಿ ಇಲ್ಲ " ಎಂದು ಹೇಳಿದ್ದೀರಿ. ಇದಕ್ಕೆ ಪೂರಕವಾಗಿ ನನ್ನ ಪ್ರಶ್ನೆಗಳು ಎಂದರೆ, ದಿನಾಂಕ 20-11-91ರಂದು ಅಂದಿನ ಮುಖ್ಯಮಂತ್ರಿಗಳ ಉಪಕಾರ್ಯದರ್ಶಿಗಳಾದ ವಿಶ್ವನಾಥ್ ಎನ್ನುವವರು ಒಂದು ಆದೇಶವನ್ನು ಹೊರಡಿಸಿದ್ದಾರೆ. "ಕೆಲಸಗಾರರ ಹಿತದೃಷ್ಟಿಯಿಂದ, ಹಿಂದಿನ ಕಾರ್ಯದರ್ಶಿಗಳು ಶಿಫಾರಸ್ಸು ಮಾಡಿದಂತೆ ಕಾರ್ಮಿಕ ಕಾನೂನುಗಳನ್ನು ಅನ್ವಯಿಸಿ ಅವರ ವೇತನವನ್ನು ಸರ್ಕಾರೀ ತತ್ಸಮಾನ ನೌಕರರ ವೇತನಕ್ಕೆ ಸಮಗೊಳಿಸಿ ಆಜ್ಞೆ ನೀಡಬಹುದು" ಎಂದು ಅದರಲ್ಲಿ ಹೇಳಿದ್ದಾರೆ. ಅನಂತರ, ದಿನಾಂಕ 4-12-91ರಂದು ಸರ್ಕಾರದ ಅಧೀನ ಕಾರ್ಯದರ್ಶಿಯವರು ಒಂದು ಆರ್ಡರ್ ಪಾಸ್ ಮಾಡಿದ್ದಾರೆ. "ಕರ್ನಾಟಕ ಸರ್ಕಾರದ ಸಚಿವಾಲಯದ ಉಪಹಾರ ಮಂದಿರದ ನೌಕರರಿಗೆ ಇನ್ನು ಮುಂದೆ ಕಾರ್ಮಿಕ ಕಾನೂನನ್ನು ಅನ್ವಯಿಸಿ ಅವರ ವೇತನವನ್ನು ಸರ್ಕಾರೀ ತತ್ಸಮಾನ ನೌಕರರ ವೇತನಕ್ಕೆ ಸಮಗೊಳಿಸುವಂತೆ ಸೂಚಿಸಲು ಆದೇಶಿಸಲ್ಪಟ್ಟಿರುತ್ತೇನೆ" ಎಂದು ಆ ಆದೇಶದಲ್ಲಿ ಹೇಳಿದ್ದಾರೆ. ಅಲ್ಲದೆ ಮಹಾರಾಷ್ಟ್ರ ಸರ್ಕಾರದವರೂ ಸಹ, ಮಹಾರಾಷ್ಟ್ರ ಸಚಿವಾಲಯದಲ್ಲಿರುವ ಕ್ಯಾಂಟೀನ್ ಬಗ್ಗೆ ಹೀಗೆ ಮಾಡಿದ್ದಾರೆ.

> "Government is now pleased to declare the Mantralaya Canten Scheme as a permanent government activity under the administrative control of the General Administration Department with effect from 10.11.1997."

ಆದ್ದರಿಂದ ನಾನು ಸರ್ಕಾರವನ್ನು ಕೇಳಿಕೊಳ್ಳುವುದೇನೆಂದರೆ, ಇಷ್ಟೆಲ್ಲಾ ಹಿಂದಿನ ಪ್ರೆಸೀಡೆಂಟ್‌ಗಳಿರುವಾಗ, ಅವರು 20 ವರ್ಷಗಳಿಂದ ಕ್ಯಾಂಟೀನನ್ನು ನಡೆಸಿಕೊಂಡು ಬರುತ್ತಿರುವಾಗ, ಅವರ ವೇತನವನ್ನು ಸರ್ಕಾರೀ ನೌಕರರ ವೇತನಕ್ಕೆ ತತ್ಸಮಾವಾಗಿ ಕೊಡುವುದಕ್ಕೆ ಸರ್ಕಾರ ತೀರ್ಮಾನ ತೆಗೆದುಕೊಳ್ಳಬೇಕು ಎಂದು ಕೋರುತ್ತೇನೆ.

ಶ್ರೀ ಡಿ.ಬಿ. ಚಂದ್ರೇಗೌಡ: ಮಾನ್ಯ ಅಧ್ಯಕ್ಷರೇ, 1974ಕ್ಕಿಂತ ಮೊದಲು ಖಾಸಗಿಯವರು ಈ ಕ್ಯಾಂಟೀನನ್ನು ನಡೆಸುತ್ತಿದ್ದರು. ಇದು ಅವರಿಗೂ ಗೊತ್ತಿದೆ. ಆಗ ಅಲ್ಲಿನ ನಿರ್ವಹಣೆ ಸರಿಯಾಗಿಲ್ಲ, ಸರಿಯಾದಂಥ ಕ್ವಾಲಿಟಿ ಆಹಾರವನ್ನು ಕೊಡುತ್ತಿಲ್ಲ ಎಂದು ನೌಕರರ ಸಂಘದ ಸಮಿತಿಯೇ ಇವರನ್ನು ನೇಮಕ ಮಾಡಿದ್ದಾರೆ. ಇದು ಸರ್ಕಾರದ ನೇಮಕಾತಿಯಲ್ಲಿ.

I want to make it very spedific and clear. ಅವರಿಗೆ ವೇತನ, ಮತ್ತೊಂದು ಮಗದೊಂದನ್ನು ಆ ಸಮಿತಿಯ ವತಿಯಿಂದಲೇ ಕೊಡುತ್ತಾರೆ. ಇವರನ್ನು ಸರ್ಕಾರಿ ನೌಕರರು ಎಂದು ಪರಿಗಣಿಸುವುದಕ್ಕೆ ಸಾಧ್ಯವೇ ಇಲ್ಲ. ಸಮಿತಿಗಳನ್ನು ರಚನೆ ಮಾಡಿಕೊಂಡು ಅವರು ನಡೆಸುವ ಕ್ಯಾಂಟೀನ್‌ಗಳ ನೌಕರರನ್ನು ಸರ್ಕಾರೀ ನೌಕರರು ಎಂದು ಘೋಷಣೆ ಮಾಡುತ್ತಾ ಹೋದರೆ ಇಂಥವು ನೂರಾರು ಬರುತ್ತವೆ. We are opening a Pandora's box. ಈ ವಿಚಾರದಲ್ಲಿ ಸಂಘ ಒಂದು ರಿಟ್ ಅರ್ಜಿಯನ್ನು ಕೂಡ ಹಾಕಿದೆ. ಅದು ಹೈಕೋರ್ಟಿನಲ್ಲಿ ಪೆಂಡಿಂಗ್ ಇದೆ. ಪೆಂಡಿಂಗ್ ಡಿಸ್ಪೋಸಲ್ ನಾವು ಚರ್ಚೆ ಮಾಡುವ ಹಾಗಿಲ್ಲ, ಮಾಡುವುದಕ್ಕೂ ಸಾಧ್ಯವಿಲ್ಲ. ಆದ್ದರಿಂದ, looking to the decision of the Court, we can take a decision at the later stage.

ಶ್ರೀ ಎಸ್.ಸುರೇಶ್ ಕುಮಾರ್: ರಿಟ್ ಪಿಟೀಷನ್ ಹಾಕಿದ್ದಾರೆ ಎನ್ನುವುದು ನನ್ನ ಗಮನಕ್ಕೂ ಬಂದಿದೆ. ಅಲ್ಲಿಯ ಅಡ್ವೋಕೇಟ್ ಜನರಲ್‌ರವರು ತಮ್ಮ ಇಲಾಖೆಗೆ ಏನೊಂದು ವಿಚಾರಗಳನ್ನು ತಿಳಿಸಿದ್ದಾರೆ ಎನ್ನುವುದು ನನಗೆ ಗೊತ್ತಿದೆ. ಅದನ್ನು ಇಲ್ಲಿ ಹೇಳುವುದು ಅಷ್ಟು ಸರಿಯಾಗುವುದಿಲ್ಲ. ಆದ್ದರಿಂದ, ನಾನು ಕೇಳುವುದು ಏನೆಂದರೆ, ಹಿಂದೆ ಅಧೀನ ಕಾರ್ಯದರ್ಶಿ ಮತ್ತು ಮುಖ್ಯ ಮಂತ್ರಿಗಳ ಉಪಕಾರ್ಯದರ್ಶಿಯವರು ಹೇಳಿರುವ ಪ್ರಕಾರವಾಗಿ ತಾವು ಮಾಡಿ. 20 ವರ್ಷಗಳಿಂದ ಅವವು ಕೆಲಸ ಮಾಡಿಕೊಂಡು ಬಂದಿದ್ದಾರೆ. ನೀವು ಹೇಳಿದ ಪ್ರಕಾರ ಮುಂಚೆ ಕ್ಯಾಂಟೀನ್ ಸರಿಯಾಗಿ ನಡೆಯುತ್ತಿರಲಿಲ್ಲ, ಉಪ್ಪಿಟ್ಟಿನಲ್ಲಿ ಜಿರಲೆ ಸಿಗುತ್ತಿತ್ತು. ಅದಕ್ಕೋಸ್ಕರ ಖಾಸಗಿಯವರು ಬೇಡ ಎಂದು ಹೇಳಿ ಈಗ ಸಮಿತಿಯವರೇ ನಡೆಸುತ್ತಿದ್ದಾರೆ. ಅವರು ಅದನ್ನು ಚೆನ್ನಾಗಿ ನಡೆಸುತ್ತಿರುವುದರಿಂದ, ಹಿಂದೆ ಸರ್ಕಾರದಿಂದ ಆದೇಶವಾಗಿದ್ದ ಹಾಗೆ ಮತ್ತು ಮಹಾರಾಷ್ಟ್ರ ಸರ್ಕಾರದವರು ಮಾಡಿರುವ ಹಾಗೆ, ಅವರ ವೇತನವನ್ನು ಸರ್ಕಾರೀ ತತ್ಸಮಾನ ನೌಕರರ ವೇತನಕ್ಕೆ ಸಮಗೊಳಿಸಲು ಸೂಚನೆಯನ್ನು ಕೊಡಿ. ಅದನ್ನು ಮಾಡಿಬಿಟ್ಟರೆ ವಿಷಯ ಮುಗಿದು ಹೋಗುತ್ತದೆ. ಅವರು ಆ ರಿಟ್ ಪಿಟೀಷನ್‌ಅನ್ನೂ ವಾಪಸ್ಸು ತೆಗೆದುಕೊಳ್ಳುತ್ತಾರೆ. ಈಗಾಗಲೇ ಹೈಕೋರ್ಟಿನಲ್ಲಿ ಸಿಕ್ಕಾಪಟ್ಟೆ ಕೇಸುಗಳು ಪೆಂಡಿಂಗ್‌ನಲ್ಲಿವೆ. ಹೀಗಿರುವಾಗ ಮತ್ತೊಂದು ಲಿಟಿಗೇಷನ್ ಏಕೆ?

ಶ್ರೀ ಡಿ.ಬಿ. ಚಂದ್ರೇಗೌಡ: ಈ ನೌಕರರನ್ನು ಸರ್ಕಾರ ನೇಮಕ ಮಾಡಿದ್ದರೆ ನೀವು ಹೇಳುವ ವಾದವನ್ನು ಒಪ್ಪಬಹುದಿತ್ತು. ಈ ನೌಕರರನ್ನು ನೇಮಕ ಮಾಡಿರತಕ್ಕಂಥವರು ನೌಕರರ ಆಡಳಿತ ಮಂಡಳಿಯವರು. 20 ವರ್ಷವಾದರೂ ಅಷ್ಟೇ, 30 ವರ್ಷವಾದರೂ ಅಷ್ಟೇ, ಅವರು ಸರ್ಕಾರಿ ನೌಕರರಲ್ಲ. ಈ ರೀತಿ ಆಡಳಿತ ಸಮಿತಿಯ ವತಿಯಿಂದ ನೇಮಕ ಮಾಡಿಕೊಂಡಿರತಕ್ಕ ನೌಕರರಿಗೆ ನೌಕರರ ತತ್ಸಮಾನ ವೇತನ ಕೊಡಬೇಕು ಎನ್ನತಕ್ಕಂಥಾದ್ದನ್ನು,

ನೀವು ಮೊದಲು ಓದಿದಂಥ ಆದೇಶದಲ್ಲಿ ಸರಿ ಇದೆ. ಏಕೆಂದರೆ ಕಾರ್ಮಿಕ ಕಾನೂನಿನ ಪ್ರಕಾರ ಯಾರ್ಯಾರು ಏನೇನು ಕೆಲಸ ಮಾಡುತ್ತಾರೆ, ಅದಕ್ಕೆ ತಕ್ಕಂತೆ ಸರ್ಕಾರ ನಿಗದಿ ಮಾಡಿರುವ ಮಿನಿಮಂ ವೇಜಸ್, ಮ್ಯಾಕ್ಸಿಮಂ ವೇಜಸ್‌ಅನ್ನು ಕೊಡಬೇಕು. ಹಾಗೆ ಕೊಡುವುದರಲ್ಲೇನೂ ತೊಂದರೆಯಿಲ್ಲ. ಆದರೆ ಅವರನ್ನು ಸರ್ಕಾರೀ ನೌಕರರು ಎಂದು ಪರಿಗಣಿಸಿ, ಖಾಯಂಗೊಳಿಸುವ ಕೆಲಸ ಆಗುವುದಿಲ್ಲ.

SRi. S. SURESH KUMAR: This is the proceedings of the meeting held in the chambers of the Secretary to the Government, D.P.A.R. on 7.12.93 at 11.00 A.M.

".... Regarding assurances given by the Hon'ble Chief Minister on the floor of the House regarding absorption of canteen employees as government employees on payment of government scales of pay..."

It is said at the end:

"The Committee is running the canteen on behalf of the government and as a honourary body, should be assured of full support to cater to...

If the government wants the present committee to run the canteen everyday...efficiently..

Finance Secretary-II has suggested to ascertain how the canteens in the other neighbouring state secretariats are managed and our government can also think of adopting the good features.

ಹೀಗೆ ನಿಮ್ಮದೇ ಒಂದು ತೀರ್ಮಾನ ನಿಮ್ಮದೇ ಒಂದು ಸಮಿತಿಯಲ್ಲಿ ಆಗಿರುವಾಗ, ಕಡೆಯ ಪಕ್ಷ ಸರ್ಕಾರ ಇದನ್ನು ಪರಿಶೀಲಿಸಬೇಕು. ಅವರಿಗೆ ತತ್ಸಮಾನ ವೇತನ ಕೊಡುವ ಬಗ್ಗೆ, government can have a fresh look into the matter.

ಶ್ರೀ ಡಿ.ಬಿ. ಚಂದ್ರೇಗೌಡ: ಮಾನ್ಯ ಅಧ್ಯಕ್ಷರೆ, ಸರ್ಕಾರ ನಿಗದಿ ಮಾಡಿರುವ ಮಿನಿಮಂ ವೇಜಸ್‌ಗಿಂತ ಹೆಚ್ಚು ಹಣ ಅವರಿಗೆ ದೊರೆಯುತ್ತಿದೆ. ಅದನ್ನು ತಾವು ವೆರಫೈ ಮಾಡಬಹುದು. ನಾನು ಮೊದಲೇ ಹೇಳಿದೆ, they are not government employees. They cannot be considered as government employees. ನಿಮ್ಮಪ್ರಶ್ನೆಯೆಂದರೆ, ನಿಗದಿತವಾದ ಪ್ರಮಾಣದಲ್ಲಿ ಅವರಿಗೆ ದೊರೆಯಬೇಕಾದ ಸೌಲಭ್ಯಗಳು ದೊರೆಯಬೇಕು ಎನ್ನುವುದು. ನಮಗೆ ಬಂದಿರುವ ಮಾಹಿತಿಗಳ ಪ್ರಕಾರ ಅವರಿಗೆ ಮಿನಿಮಂ ವೇಜಸ್‌ಗಿಂತ ಜಾಸ್ತಿ ಬರುತ್ತಿದೆ. ನಾನು ತಿಳಿದುಕೊಂಡಿರುವ ಪ್ರಕಾರ, I don't know, I may be wrong also. ನೀವು ಓದಿದ ಸರ್ಕಾರೀ ಆದೇಶ, ಸೆಕ್ರೆಟೇರಿಯಲ್ ಕ್ಯಾಂಟೀನ್‌ಗೆ ಸಂಬಂಧಪಟ್ಟಂಥ ಆದೇಶ ಎಂದು ಭಾವಿಸಿದ್ದೇನೆ.